# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 293 |
| ಸದಸ್ಯರ ಹೆಸರು | ಶ್ರೀ ಡಾ: ವೈ.ಎ. ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16-07-2019 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | 2018-19ನೇ ಸಾಲಿನಲ್ಲಿ ಔಷಧ ಖರೀದಿಗೆ ಕರೆದಿದ್ದ ಟೆಂಡರ್‌ನಲ್ಲಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ಮಾಹಿತಿ ನೀಡುವುದು) | ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಅಕ್ರಮ ನಡೆದಿರುವುದಿಲ್ಲ. ಟೆಂಡರ್ ಜೊತೆಗೆ ಸಲ್ಲಿಸಲಾಗಿದ್ದ ದಾಖಲೆಗಳ ಪರಿಶೀಲನೆಯಲ್ಲಿ ಕೆಲವೊಂದು ಲೋಪದೋಷಗಳಾಗಿರುವುದನ್ನು ಗಮನಿಸಿದ್ದು ಟೆಂಡರ್ ಪರಿಶೀಲನಾ ಸಮಿತಿ (Tender scrutiny committe)ಯಲ್ಲಿ ಈ ಬಗ್ಗೆ ಮರುಪರಿಶೀಲಿಸಿ ಯಾವುದೇ ಲೋಪದೋಷಕ್ಕೆ ಎಡೆಮಾಡಿಕೊಡದೆ ಪ್ರಕ್ರಿಯೆ ಅಂತಿಮಗೊಳಿಸಲಾಗಿದೆ. |
| ಆ) | ಪ್ರತಿಸ್ಪರ್ಧಿಗಳ ಬಿಡ್ ಮೊತ್ತ ಅಧಿಕಾರಿಗಳಿಂದಲೇ ಸೋರಿಕೆಯಾಗಿರುವುದು ನಿಜವೇ: (ಮಾಹಿತಿ ನೀಡುವುದು) | ಇಲ್ಲ<br>ಟೆಂಡರ್‌ನ ತಾಂತ್ರಿಕ ಅರ್ಹತೆ ನಂತರ. ಅರ್ಹ ಕಂಪನಿಗಳು ನಮೂದಿಸಿರುವ ಆರ್ಥಿಕ ಬಿಡ್ಡನ್ನು ಮಾತ್ರ (Financial-bid) ತೆರೆಯಲಾಗಿರುವುದರಿಂದ ಯಾವುದೇ ರೀತಿಯ ಸೋರಿಕೆಯಾಗಲು ಅವಕಾಶವಿರುವುದಿಲ್ಲ. ಒಮ್ಮೆ ಆರ್ಥಿಕ ಬಿಡ್ಡನ್ನು (Financial-bid)ತೆರೆದ ನಂತರವಷ್ಟೆ ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ ತಿಳಿಯುವುದು. |
| ಇ) | ಟೆಂಡರ್ ಮೌಲ್ಯಮಾಪನದಲ್ಲೂ ಅಕ್ರಮ ನಡೆದಿರುವುದು ನಿಜವೇ: ಇದ್ದಲ್ಲಿ, ಸಂಬಂಧಪಟ್ಟವರ ಮೇಲೆ ತೆಗೆದುಕೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ಮೌಲ್ಯಮಾಪನಕ್ಕೆ ಸಂಬಂದಿಸಿದ ಕೆಲವು ದಾಖಲೆಗಳ ಪರಿಶೀಲನೆಯಲ್ಲಿ ಲೋಪ ಕಂಡು ಬಂದಿದ್ದು ಅದಕ್ಕೆ ಕಾರಣರಾಗಿದ್ದ ಮೂವರು ಅಧಿಕಾರಿ/ಸಿಬ್ಬಂದಿಯನ್ನು ಈ ಸಂಸ್ಥೆಯಿಂದ ವರ್ಗಾಯಿಸಲಾಗಿರುತ್ತದೆ. |

ಕಡತ ಸಂಖ್ಯೆ: ಆಕುಕ 21 ಎಫ್‌ಪಿಎಆರ್ 2019

(ಶಿವಾನಂದ ಎಸ್. ಪಾಟೀಲ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು